

## ತೆಂಗಿಗೆ ಸಿಮೆಂಟ್ ಕವಚ

ತೆಂಗಿನ ಗಿಡದ ರಕ್ಷಣೆಗೆ ತಗಡಿನ ಶೀಟ್‌ನಿಂದ ತಯಾರಿಸಿದ ಟಿನ್‌ಗಳನ್ನು ಬಳಸುತ್ತಿದ್ದ ರೈತರು ಈಗ ಸಿಮೆಂಟ್ ರಿಂಗ್‌ನತ್ತ ಮುಖ ಮಾಡಿದ್ದಾರೆ. ಚಿತ್ರದಲ್ಲಿ ಕಾಣುತ್ತಿರುವುದು ಮಂಡ್ಯ ನಗರದ ಸಮೀಪದ ಬೇವಿನಹಳ್ಳಿ ವ್ಯಾಪ್ತಿಯ ತೋಟದ ತೆಂಗಿನ ಸಸಿ. ಜಿಲ್ಲಾ ವ್ಯಾಪ್ತಿಯಲ್ಲಿ ಕಬ್ಬನ್ನು ಹೆಚ್ಚು ಬೆಳೆಯುತ್ತಿರುವುದರಿಂದ ಕಾಡುಹಂದಿ, ಮುಳ್ಳುಹಂದಿ ಹಾಗೂ ಹೆಗ್ಗಣಗಳ ಕಾಟ ಅತಿಯಾಗಿದೆ. ತೆಂಗಿಗೂ ಇವುಗಳ ಸಮಸ್ಯೆ ತಪ್ಪಿದ್ದಲ್ಲ. ಇದನ್ನು ತಡೆಗಟ್ಟಲು ಟಿನ್‌ಗಳ ಬದಲು ಸಿಮೆಂಟ್ ರಿಂಗ್ ಬಳಸುತ್ತಿದ್ದಾರೆ. ಕಾರಣ ಈ ಸಿಮೆಂಟ್ ರಿಂಗ್‌ಗಳು ದೀರ್ಘಕಾಲದವರೆಗೆ ಬಾಳಿಕೆ ಬರುತ್ತವೆ ಎಂಬುದು. 'ತೆಂಗಿನ ಸಸಿಗಳಿಗೆ ಗುಂಬ ಬರುವವರೆಗೆ, ಅಂದರೆ ಸುಮಾರು ಐದಾರು ವರ್ಷಗಳವರೆಗೆ (ತೆಂಗಿನ ಗಿಡದ ಬುಡ ದಪ್ಪ ಆಗುವವರೆಗೆ) ಕಾಡುಹಂದಿ, ಮುಳ್ಳುಹಂದಿ, ಹೆಗ್ಗಣಗಳ ಕಾಟ ಇದ್ದೇ ಇರುತ್ತದೆ. ಅಷ್ಟು ವರ್ಷ ಟಿನ್‌ಗಳು ಬಾಳಿಕೆ ಬರುವುದಿಲ್ಲ. ಬೇಗ ತುಕ್ಕು ಹಿಡಿಯುತ್ತವೆ. ಹೀಗಾಗಿ, ಟಿನ್‌ಗಿಂತ ಸಿಮೆಂಟ್ ಸೂಕ್ತ ಹಾಗೂ ಅದರೊಳಗೆ ಗೊಬ್ಬರ, ಇತರೆ ಸಸ್ಯ ತ್ಯಾಜ್ಯವನ್ನು ಹಾಕಬಹುದು. ಇದರಿಂದ ಗಿಡದ ಬೆಳವಣಿಗೆಗೆ ಸಹಾಯಕವಾಗುತ್ತದೆ' ಎನ್ನುವುದು ತೋಟದ ಮಾಲೀಕರ ಅಭಿಪ್ರಾಯ.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ

## ಬೆಳಕು ನಂದುವ ಕ್ಷಣ

ಪ್ರತಿದಿನ ಬೆಳಿಗ್ಗೆ ಮತ್ತು ಸಂಜೆ ದೇವರಿಗೆ ದೀಪ ಹಚ್ಚುವ ಪದ್ಧತಿ ಹಿಂದೂಗಳದ್ದು. ಸಾಮಾನ್ಯವಾಗಿ ದೇವರ ಕೋಣೆಯಲ್ಲಿ ದೀಪವನ್ನು ಬೆಳಗಿಸಿ ಸುಖ, ಶಾಂತಿ, ನೆಮ್ಮದಿಗಾಗಿ ಪ್ರಾರ್ಥಿಸಿ ಕೈ ಮುಗಿದು ಹೊರಗೆ ಬರುತ್ತೇವೆ. ಆದರೆ ದೀಪ ನಂದುವವರೆಗೆ ಅಲ್ಲಿಯೇ ಇರುವುದಿಲ್ಲ. ಹಚ್ಚಿದ ದೀಪ ಎಣ್ಣೆ ಇರುವವರೆಗೆ ಪ್ರಜ್ವಲಿಸಿ ನಂದುವ ಕ್ಷಣವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅಲ್ಲೊಂದು ಕಲಾಲೋಕ ತೆರೆದುಕೊಳ್ಳುತ್ತದೆ. ದೀಪ ನಂದುವಾಗ ವಿವಿಧ ಆಕೃತಿಯ ಕಲೆಗಳನ್ನು ಸೃಷ್ಟಿಸಿ ಅಷ್ಟೇ ವೇಗದಲ್ಲಿ ಅವು ಕಣ್ಮರೆಯಾಗುತ್ತವೆ. ಕುತೂಹಲದಿಂದ ದೀಪವನ್ನು ಬೆಳಗಿಸಿದ ನಂತರ ಉರಿಯುವ ದೀಪದಲ್ಲಿನ ಬತ್ತಿ ವಿವಿಧ ಆಕೃತಿ ಪಡೆಯುವುದನ್ನು ಗಮನಿಸಿ ಫೋಟೊ ತೆಗೆದಾಗ ವೈವಿಧ್ಯಮಯ ಕಲಾಕೃತಿಗಳು ನನ್ನ ಗಮನಕ್ಕೆ ಬಂದು ಸೋಜಿಗ ಎನಿಸಿತು. ಅರ್ಧ ಚಂದ್ರನಂತೆ, ಹೂಗಳಂತೆ, ಕಿವಿಗಳಂತೆ ಕಂಡುಬಂದ ಕೆಲವು ಫೋಟೊಗಳು ನಿಮಗಾಗಿ.

—ಅರುಣ್ ಕುಮಾರ್ ತಾಪ್ಸೆ, ವಿಜಯನಗರ





